| Roll No. | | | | | | | | | | | | Serial No. of Q. C. A. B. |
|---|---|---|---|---|---|---|---|---|---|---|---|---|

ಒಟ್ಟು ಪ್ರಶ್ನೆಗಳ ಸಂಖ್ಯೆ : 56 ] [ ಒಟ್ಟು ಮುದ್ರಿತ ಪುಟಗಳ ಸಂಖ್ಯೆ : 16

Total No. of Questions : 56 ] [ Total No. of Printed Pages : 16

**ಸಂಕೇತ ಸಂಖ್ಯೆ : 92-K** **ವಿಷಯ : ಭಾರತೀಯ ಅರ್ಥಶಾಸ್ತ್ರ**

**Code No. : 92-K** **Subject : INDIAN ECONOMICS**

( ಕನ್ನಡ ಭಾಷಾಂತರ / Kannada Version )

ದಿನಾಂಕ : 29. 03. 2014 ] [ Date : 29. 03. 2014

ಸಮಯ : ಬೆಳಿಗ್ಗೆ 9-30 ರಿಂದ ಮಧ್ಯಾಹ್ನ 12-45 ರವರೆಗೆ ] [ Time : 9-30 A.M. to 12-45 P.M.

ಪರಮಾವಧಿ ಅಂಕಗಳು : 100 ] [ Max. Marks : 100

**FOR OFFICE USE ONLY**

| Q. No. | Marks | Q. No. | Marks | Q. No. | Marks | Q. No. | Marks | Q. No. | Marks |
|---|---|---|---|---|---|---|---|---|---|
| 1. | | 13. | | 25. | | 37. | | 49. | |
| 2. | | 14. | | 26. | | 38. | | 50. | |
| 3. | | 15. | | 27. | | 39. | | 51. | |
| 4. | | 16. | | 28. | | 40. | | 52. | |
| 5. | | 17. | | 29. | | 41. | | 53. | |
| 6. | | 18. | | 30. | | 42. | | 54. | |
| 7. | | 19. | | 31. | | 43. | | 55. | |
| 8. | | 20. | | 32. | | 44. | | 56. | |
| 9. | | 21. | | 33. | | 45. | | × | |
| 10. | | 22. | | 34. | | 46. | | × | |
| 11. | | 23. | | 35. | | 47. | | × | |
| 12. | | 24. | | 36. | | 48. | | × | |
| | | | | | | | | ***Total Marks*** | |

| **Total Marks in words** | | **Grand Total** | |
|---|---|---|---|

| | | | |
|---|---|---|---|
| 1. ✓ | | | |
| 2. ✓ | | ✓ | ✓ |
| *Signature of Evaluators* | *Registration No.* | *Signature of the Deputy Chief* | *Signature of the Room Invigilator* |

[ Turn over

*ಸಾಮಾನ್ಯ ಸೂಚನೆಗಳು :*

i) ಈ ಪ್ರಶ್ನೋತ್ತರ ಕಿರುಪುಸ್ತಕವು ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಒಟ್ಟು 56 ಪ್ರಶ್ನೆಗಳನ್ನು ಹೊಂದಿದೆ.

ii) ಪ್ರತಿಯೊಂದು ವಸ್ತುನಿಷ್ಠ ಮಾದರಿ ಪ್ರಶ್ನೆಗೆ ಉತ್ತರಕ್ಕಾಗಿ ಜಾಗವನ್ನು ಕೊಡಲಾಗಿದೆ. ಸರಿಯಾದ ಉತ್ತರವನ್ನು ಆರಿಸಿ, ಕೊಟ್ಟಿರುವ ಜಾಗದಲ್ಲಿ ಕ್ರಮಾಕ್ಷರದೊಂದಿಗೆ ಪೂರ್ಣ ಉತ್ತರವನ್ನು ಬರೆಯಿರಿ.

iii) ವಿಷಯನಿಷ್ಠ ಮಾದರಿ ಪ್ರಶ್ನೆಯ ಉತ್ತರಗಳಿಗೆ ಸಾಕಷ್ಟು ಜಾಗವನ್ನು ಕೊಡಲಾಗಿದೆ. ಉತ್ತರಗಳನ್ನು ಆಯಾ ಜಾಗಗಳಲ್ಲಿಯೇ ಬರೆಯಿರಿ.

iv) ವಸ್ತುನಿಷ್ಠ ಮಾದರಿ ಮತ್ತು ವಿಷಯನಿಷ್ಠ ಮಾದರಿ ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಗಳನ್ನು ಅನುಸರಿಸಿ.

v) ವಿದ್ಯಾರ್ಥಿಗಳು ಪೆನ್ಸಿಲ್‌ನಿಂದ ( ಸೀಸದ ಕಡ್ಡಿ ) ಉತ್ತರಗಳನ್ನು ಬರೆಯಬಾರದು. ಪೆನ್ಸಿಲ್‌ನಿಂದ ಉತ್ತರ ಬರೆದಲ್ಲಿ ಮೌಲ್ಯಮಾಪನಕ್ಕೆ ಪರಿಗಣಿಸಲಾಗುವುದಿಲ್ಲ. (ನಕ್ಷೆಗಳು, ರೇಖಾಚಿತ್ರಗಳು ಮತ್ತು ಭೂಪಟಗಳನ್ನು ಬಿಟ್ಟು).

vi) ಬಹು-ಆಯ್ಕೆ, ಖಾಲಿ ಸ್ಥಳಗಳನ್ನು ಭರ್ತಿ ಮಾಡುವುದು, ಹೊಂದಿಸಿ ಬರೆಯುವ ಪ್ರಶ್ನೆಗಳ ವಿಷಯದಲ್ಲಿ ಕೆರೆದು ಅಳಿಸುವುದು / ತಿದ್ದಿ ಬರೆಯುವುದು / ಗುರುತಿಸುವುದು ಮಾಡಿದಲ್ಲಿ ಮೌಲ್ಯಮಾಪನಕ್ಕೆ ಅನರ್ಹವಾಗುತ್ತದೆ.

vii) ಪ್ರಶ್ನೆ ಪತ್ರಿಕೆಯನ್ನು ಓದಲು 15 ನಿಮಿಷಗಳ ಹೆಚ್ಚಿನ ಕಾಲಾವಕಾಶ ನೀಡಲಾಗಿದೆ.

I. ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ಕೊಡಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಉತ್ತರಕ್ಕೆ ಕೊಟ್ಟಿರುವ ಜಾಗದಲ್ಲಿಯೇ ಕ್ರಮಾಕ್ಷರದೊಂದಿಗೆ ಪೂರ್ಣ ಉತ್ತರವನ್ನು ಬರೆಯಿರಿ : $15 \times 1 = 15$

1. 20 ನೇ ಶತಮಾನವನ್ನು ಹೀಗೆಂದು ಕರೆಯುವರು

   (A) ಯೋಜನಾ ಯುಗ (B) ಪುನರುಜ್ಜೀವನ ಯುಗ

   (C) ಸ್ವಾತಂತ್ರ್ಯ ಯುಗ (D) ಕ್ರಾಂತಿ ಯುಗ

   *ಉತ್ತರ :* ____________________

2. ಭಾರತದ ಯೋಜನಾ ಆಯೋಗದ ಮೊಟ್ಟಮೊದಲ ಅಧ್ಯಕ್ಷ

   (A) ಗುಲ್ಜಾರಿಲಾಲ್ ನಂದ (B) ಜವಹರಲಾಲ್ ನೆಹರು

   (C) ರಾಜೇಂದ್ರ ಪ್ರಸಾದ್ (D) ಸರ್ದಾರ್ ಪಟೇಲ್

   *ಉತ್ತರ :* ____________________

3. ಭಾರತೀಯರ ಪ್ರಧಾನ ಕಸುಬು

   (A) ಕೈಗಾರಿಕೆಗಳು (B) ವ್ಯಾಪಾರ

   (C) ವಾಣಿಜ್ಯ (D) ಕೃಷಿ

   *ಉತ್ತರ :* ____________________

4. ಭಾರತದ ಮೊದಲನೇ ಪಂಚವಾರ್ಷಿಕ ಯೋಜನೆಯು ಪ್ರಾರಂಭವಾದ ವರ್ಷ

(A) 1956 (B) 1947

(C) 1951 (D) 1950

ಉತ್ತರ : ________________

5. ಎರಡನೆ ಪಂಚವಾರ್ಷಿಕ ಯೋಜನೆಯನ್ನು 'ಕೈಗಾರಿಕಾ ಯೋಜನೆ' ಎಂದು ಕರೆಯುತ್ತಾರೆ ಏಕೆಂದರೆ

(A) ಮೂಲ ಹಾಗೂ ಭಾರಿ ಕೈಗಾರಿಕೆಗಳಿಗೆ ಪ್ರಾಮುಖ್ಯತೆ ನೀಡಲಾಗಿತ್ತು

(B) ಕೃಷಿಯಾಧಾರಿತ ಮತ್ತು ಮೂಲ ಕೈಗಾರಿಕೆಗಳಿಗೆ ಪ್ರಾಮುಖ್ಯತೆ ನೀಡಲಾಗಿತ್ತು

(C) ಕಚ್ಚಾವಸ್ತುಗಳ ಉತ್ಪಾದನೆಗೆ ಹೆಚ್ಚಿನ ಪ್ರಾಮುಖ್ಯತೆ ನೀಡಲಾಗಿತ್ತು

(D) ಹೆಚ್ಚಿನ ಪ್ರಮಾಣದ ಉದ್ಯೋಗಾವಕಾಶಗಳನ್ನು ಒದಗಿಸಿತ್ತು

ಉತ್ತರ : ________________

6. 6 ವರ್ಷಗಳಿಂದ 11 ವರ್ಷಗಳವರೆಗಿನ ಮಕ್ಕಳಿಗೆ ಉಚಿತ ಮತ್ತು ಕಡ್ಡಾಯ ಶಿಕ್ಷಣವನ್ನು ಜಾರಿಗೆ ತಂದ ಯೋಜನೆ

(A) ಮೊದಲನೆ ಪಂಚವಾರ್ಷಿಕ ಯೋಜನೆ (B) ಮೂರನೆ ಪಂಚವಾರ್ಷಿಕ ಯೋಜನೆ

(C) ಎರಡನೆ ಪಂಚವಾರ್ಷಿಕ ಯೋಜನೆ (D) ನಾಲ್ಕನೆ ಪಂಚವಾರ್ಷಿಕ ಯೋಜನೆ

ಉತ್ತರ : ________________

7. ನಾಲ್ಕನೆ ಪಂಚವಾರ್ಷಿಕ ಯೋಜನೆಯು ಮೊದಲ ಆದ್ಯತೆಯನ್ನು ನೀಡಿದ ವಲಯ

(A) ಕೃಷಿ ಮತ್ತು ನೀರಾವರಿ (B) ಕೈಗಾರಿಕೆಗಳು

(C) ಸಾರಿಗೆ ಮತ್ತು ಸಂಪರ್ಕ (D) ಕೈಗಾರಿಕೆ ಮತ್ತು ಖನಿಜಗಳು

ಉತ್ತರ : ________________

8. ಐದನೆ ಪಂಚವಾರ್ಷಿಕ ಯೋಜನೆಯ ಪ್ರಮುಖ ಗುರಿ

(A) ದಾರಿದ್ರ್ಯ ನಿರ್ಮೂಲನೆ (B) ಅನಕ್ಷರತೆ ನಿರ್ಮೂಲನೆ

(C) ಉಚಿತ ಶಿಕ್ಷಣ ಒದಗಿಸುವುದು (D) ಕುಡಿಯುವ ನೀರನ್ನು ಒದಗಿಸುವುದು

ಉತ್ತರ : ________________

9. ಆರನೆ ಪಂಚವಾರ್ಷಿಕ ಯೋಜನೆಯು ವಿಶೇಷ ಗಮನ ನೀಡಿದ ಕ್ಷೇತ್ರ

(A) ಕನಿಷ್ಠ ಅವಶ್ಯಕತೆಗಳನ್ನು ಪೂರೈಸುವುದು (B) ಗ್ರಾಮೀಣ ಅಭಿವೃದ್ಧಿಗೆ ಆದ್ಯತೆ

(C) ಶಿಕ್ಷಣ ಕ್ಷೇತ್ರಕ್ಕೆ ಆದ್ಯತೆ (D) ನೀರಾವರಿ ಪೂರೈಕೆ

ಉತ್ತರ : ________________

[ Turn over

10. ಏಳನೆ ಪಂಚವಾರ್ಷಿಕ ಯೋಜನೆಯ ಗಾತ್ರ ತುಂಬಾ ದೊಡ್ಡದಾಗಿತ್ತು. ಏಕೆಂದರೆ ಅದು

(A) ಹಲವಾರು ಸಮಸ್ಯೆಗಳಿಗೆ ಪರಿಹಾರ ಒದಗಿಸಿತ್ತು

(B) ಹಲವಾರು ಕ್ಷೇತ್ರಗಳಿಗೆ ಪ್ರಾಮುಖ್ಯತೆ ನೀಡಿತ್ತು

(C) ಐದು ವರ್ಷಗಳಿಗಿಂತ ಹೆಚ್ಚಿನ ಅವಧಿಯನ್ನು ತೆಗೆದುಕೊಂಡಿತು

(D) ಹೆಚ್ಚಿನ ಪ್ರಮಾಣದ ಉದ್ಯೋಗಗಳನ್ನು ಒದಗಿಸಿತ್ತು

*ಉತ್ತರ :* ____________________

11. ಭಾರತವು ವಿದೇಶಿ ನೆರವಿನ ಮೊರೆಗೆ ಹೋಗುವುದು ಅನಿವಾರ್ಯವಾಗಿದೆ. ಏಕೆಂದರೆ

(A) ನಮ್ಮ ರಾಷ್ಟ್ರದ ರಫ್ತುಗಳಿಂದ ಬರುವ ಹಣ ಆಮದು ಮಾಡಿಕೊಳ್ಳುವ ವೆಚ್ಚಕ್ಕೆ ಸಾಲುವುದಿಲ್ಲ

(B) ನಮ್ಮ ರಾಷ್ಟ್ರದ ಬಹುಸಂಖ್ಯೆಯ ಜನರು ಅನಕ್ಷರಸ್ಥರಾಗಿರುವುದು

(C) ನಮ್ಮ ರಾಷ್ಟ್ರದಲ್ಲಿ ಅನಕ್ಷರತೆ ಮತ್ತು ನಿರುದ್ಯೋಗ ಸಮಸ್ಯೆಗಳು ಹೆಚ್ಚಾಗಿರುವುದು

(D) ವಿದೇಶಿ ರಾಷ್ಟ್ರಗಳು ಕಡಿಮೆ ಬಡ್ಡಿದರದಲ್ಲಿ ನಮಗೆ ಸಾಲ ಒದಗಿಸುತ್ತಿರುವುದು

*ಉತ್ತರ :* ____________________

12. ಭಾರತದ ಅತಿ ಎತ್ತರವಾದ (ನೀರಾವರಿ ಯೋಜನೆ) ಅಣೆಕಟ್ಟು

(A) ದಾಮೋದರ ನದಿ ಕಣಿವೆ ಯೋಜನೆ (B) ಭಾಕ್ರಾ ನಂಗಲ್ ಅಣೆಕಟ್ಟು

(C) ಕೋಸಿ ನದಿ ಯೋಜನೆ (D) ಚಂಬಲ್ ನದಿ ಯೋಜನೆ

*ಉತ್ತರ :* ____________________

13. ಭಾರತದಲ್ಲಿ ಮೊಟ್ಟ ಮೊದಲ ಕಾರ್ಮಿಕ ಸಂಘವನ್ನು ಆರಂಭಿಸಿದವರು

(A) ವಾಡಿಯಾ (B) ರಾನಡೆ

(C) ಎಂ.ಎನ್. ರಾಯ್ (D) ನವರೋಜಿ

*ಉತ್ತರ :* ____________________

14. ರಷ್ಯಾದಲ್ಲಿ ಚಲಾವಣೆಯಲ್ಲಿರುವ ಹಣ

(A) ಪೌಂಡ್ (B) ಲಿರಾ

(C) ಯೆನ್ (D) ರೂಬಲ್

*ಉತ್ತರ :* ____________________

15. 'ವಿಶ್ವದ ಕೈಗಾರಿಕಾ ಕಾರ್ಯಾಗಾರ' ಎಂದು ಹೆಸರುವಾಸಿಯಾಗಿದ್ದ ರಾಷ್ಟ್ರ

(A) ಜಪಾನ್ (B) ಅಮೆರಿಕಾ ಸಂಯುಕ್ತ ಸಂಸ್ಥಾನಗಳು

(C) ಸೋವಿಯತ್ ರಷ್ಯಾ (D) ಬ್ರಿಟನ್

*ಉತ್ತರ :* ____________________

II. ಈ ಕೆಳಗಿನ ವಾಕ್ಯಗಳಲ್ಲಿ ಖಾಲಿ ಬಿಟ್ಟಿರುವ ಜಾಗಗಳನ್ನು ಸೂಕ್ತ ಪದಗಳಿಂದ ತುಂಬಿ ಬರೆಯಿರಿ : 5 × 1 = 5

16. ಭಾರತದ ಯೋಜನಾ ಆಯೋಗವು ಜಾರಿಗೆ ಬಂದ ವರ್ಷ ........................................................

17. ಭಾರತವು ಅನುಸರಿಸುತ್ತಿರುವ ಅರ್ಥವ್ಯವಸ್ಥೆ ........................................................

18. 1928 ರ ಯೋಜನಾ ಯುಗವನ್ನು ಆರಂಭಿಸಿದ ರಾಷ್ಟ್ರ ........................................................

19. 'ಭಾರತಕ್ಕಾಗಿ ಯೋಜಿತ ಅರ್ಥವ್ಯವಸ್ಥೆ' ಎಂಬ ಕೃತಿಯನ್ನು ಬರೆದವರು ..........................................

20. ಅಮೆರಿಕಾ ಸಂಯುಕ್ತ ಸಂಸ್ಥಾನದಲ್ಲಿ ಬಳಕೆಯಲ್ಲಿರುವ ಹಣ........................................................

III. 21. ಈ ಕೆಳಗೆ ಕೊಟ್ಟಿರುವ **A** ಪಟ್ಟಿಯಲ್ಲಿನ ಅಂಶಗಳನ್ನು **B** ಪಟ್ಟಿಯಲ್ಲಿನ ಅಂಶಗಳೊಡನೆ ಹೊಂದಿಸಿ ಬರೆಯಿರಿ : 5 × 1 = 5

| ***A ಪಟ್ಟಿ*** | ***B ಪಟ್ಟಿ*** |
|---|---|
| a) ದುರ್ಗಾಪುರ ಉಕ್ಕಿನ ಘಟಕ | i) ಹಿಮಾಚಲ ಪ್ರದೇಶ |
| b) ರೂರಕೆಲಾ ಉಕ್ಕಿನ ಘಟಕ | ii) ಕರ್ನಾಟಕ |
| c) ನಹಾನೆ ಫೌಂಡ್ರಿ | iii) ಒಡಿಶಾ |
| d) ಹಿಂದೂಸ್ಥಾನ ಷಿಪ್‌ಯಾರ್ಡ್ | iv) ಬಿಹಾರ |
| e) ಹಿಂದೂಸ್ಥಾನ ಮಷಿನ್ ಟೂಲ್ಸ್ | v) ತಮಿಳುನಾಡು |
| | vi) ಆಂಧ್ರಪ್ರದೇಶ |
| | vii) ಕೇರಳ |
| | viii) ಪಶ್ಚಿಮ ಬಂಗಾಳ |

*ಉತ್ತರಗಳು :* a) ____________________

b) ____________________

c) ____________________

d) ____________________

e) ____________________

IV. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೂ **ಒಂದು** ವಾಕ್ಯದಲ್ಲಿ ಉತ್ತರ ಬರೆಯಿರಿ : $9 \times 1 = 9$

22. ಆರ್ಥಿಕ ಯೋಜನೆ ಎಂದರೇನು ?

23. ಜನತಾ ಯೋಜನೆಯನ್ನು ಜಾರಿಗೆ ತಂದವರು ಯಾರು ?

24. ಮೊದಲನೆ ಪಂಚವಾರ್ಷಿಕ ಯೋಜನೆಯಲ್ಲಿ ಆದ್ಯತೆ ನೀಡಲಾದ ಕ್ಷೇತ್ರಗಳಾವುವು ?

25. ನಾಲ್ಕನೆ ಪಂಚವಾರ್ಷಿಕ ಯೋಜನೆಯು ತನ್ನ ಆರ್ಥಿಕ ಚಟುವಟಿಕೆಗಳನ್ನು ಹಿಂದುಳಿದ ಪ್ರದೇಶಗಳಿಗೆ ಏಕೆ ವಿಸ್ತರಿಸಿತ್ತು ?

26. ನಾಲ್ಕನೆ ಪಂಚವಾರ್ಷಿಕ ಯೋಜನೆಯ ಕೊನೆಯ ವರ್ಷ ಏಕೆ ಅಸಾಮಾನ್ಯ ವರ್ಷವಾಗಿತ್ತು ?

27. ಯಾವ ನದಿಗೆ ಅಡ್ಡಲಾಗಿ ಹಿರಾಕುಡ್ ನದಿ ಕಣಿವೆ ಯೋಜನೆಯನ್ನು ನಿರ್ಮಿಸಲಾಗಿದೆ ?

28. ಭಾರತ ಸರ್ಕಾರವು ಕಾರ್ಮಿಕ ಸಂಘದ ಕಾನೂನನ್ನು ಯಾವಾಗ ಜಾರಿಗೆ ತಂದಿತು ?

29. ಸಮತೋಲನ ವ್ಯಾಪಾರ ಎಂದರೇನು ?

30. ಕೈಗಾರಿಕಾ ಕ್ರಾಂತಿಯು ಎಲ್ಲಿ ನಡೆಯಿತು ?

V. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೂ **ಎರಡು** ಅಥವಾ **ಮೂರು** ವಾಕ್ಯಗಳಲ್ಲಿ ಉತ್ತರ ಬರೆಯಿರಿ : 16 × 2 = 32

31. ಎರಡನೆ ಪಂಚವಾರ್ಷಿಕ ಯೋಜನೆಯು ತನ್ನ ಗುರಿ ಸಾಧಿಸುವಲ್ಲಿ ಏಕೆ ವಿಫಲವಾಯಿತು ?

32. ನಾಲ್ಕನೆ ಪಂಚವಾರ್ಷಿಕ ಯೋಜನೆಯ ಸಾಧನೆಗಳೇನು ?

33. ಕೈಗಾರಿಕಾ ಕ್ಷೇತ್ರದಲ್ಲಿ ಐದನೆ ಪಂಚವಾರ್ಷಿಕ ಯೋಜನೆಯ ಸಾಧನೆಗಳೇನು ?

34. ಏಳನೆ ಪಂಚವಾರ್ಷಿಕ ಯೋಜನೆಯು ತನ್ನ ನಿಗದಿತ ಗುರಿ ತಲುಪುವಲ್ಲಿ ಏಕೆ ವಿಫಲವಾಯಿತು ?

35. ಸರ್ಕಾರ ಸಂಗ್ರಹಿಸುತ್ತಿರುವ ಎರಡು ವಿಧದ ತೆರಿಗೆಗಳು ಯಾವುವು ?

36. ಬಡತನ ನಿರ್ಮೂಲನೆಗೆ ಕೈಗೊಂಡಿರುವ ಯಾವುದಾದರೂ ಎರಡು ಕ್ರಮಗಳನ್ನು ತಿಳಿಸಿ.

37. ಭಾರತದ ಪ್ರಮುಖ ಅಣುಶಕ್ತಿ ಸ್ಥಾವರಗಳನ್ನು ಹೆಸರಿಸಿ.

38. ಕಾರ್ಮಿಕರ ಮೂಲ ದೌರ್ಬಲ್ಯಗಳನ್ನು ಪಟ್ಟಿಮಾಡಿ.

39. ಅನುಕೂಲಕರ ಪಾವತಿ ಶುಲ್ಕ ಒಂದು ರಾಷ್ಟ್ರದ ಪ್ರಗತಿಗೆ ಹೇಗೆ ಸಹಾಯಕವಾಗಿದೆ ?

40. ವಿದೇಶಿ ವಿನಿಮಯ ಎಂದರೇನು ? ಅದನ್ನು ಹೇಗೆ ನಿರ್ಧಾರ ಮಾಡಲಾಗುತ್ತದೆ ?

41. ಆಮದು ಪ್ರಮಾಣವನ್ನು ಹೇಗೆ ಕಡಿಮೆ ಮಾಡಬಹುದು ?

42. ಭಾರತದ ವಿದೇಶಿ ವ್ಯಾಪಾರದಲ್ಲಿ ಕಂಡುಬರುವ ಮಹತ್ತರ ಬದಲಾವಣೆಗಳಾವುವು ?

43. ಜಪಾನ್ ಪ್ರಾಕೃತಿಕ ಸಂಪನ್ಮೂಲಗಳ ದೃಷ್ಟಿಯಿಂದ ಶ್ರೀಮಂತವಲ್ಲದಿದ್ದರೂ ಒಂದು ಸಂಪದ್ಭರಿತ ರಾಷ್ಟ್ರವಾಗಿದೆ. ಏಕೆ ?

44. ಭಾರತದಲ್ಲಿ ಜನರ ಜೀವನ ಏಕೆ ಶೋಚನೀಯವಾಗಿದೆ ?

45. ಭಾರತದಲ್ಲಿ ಕಂಡು ಬರುತ್ತಿರುವ ಸರ್ವೇ ಸಾಮಾನ್ಯ ಸಮಸ್ಯೆಗಳಾವುವು ?

46. ಕಾರ್ಮಿಕರ ಸಮಸ್ಯೆಗಳ ನಿವಾರಣೆಗೆ ಭಾರತ ಸರ್ಕಾರ ಕೈಗೊಂಡಿರುವ ಕ್ರಮಗಳಾವುವು ?

VI. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೂ ಆರು ವಾಕ್ಯಗಳಲ್ಲಿ ಉತ್ತರಿಸಿ : $6 \times 3 = 18$

47. ಯೋಜನಾ ಆಯೋಗದ ಕಾರ್ಯಗಳಾವುವು ?

48. ಮೊದಲನೆ ಪಂಚವಾರ್ಷಿಕ ಯೋಜನೆಯ ಪ್ರಮುಖ ಸಾಧನೆಗಳನ್ನು ಪಟ್ಟಿಮಾಡಿ.

49. ಕೈಗಾರಿಕೆ ಕ್ಷೇತ್ರದಲ್ಲಿ ಮೂರನೆ ಪಂಚವಾರ್ಷಿಕ ಯೋಜನೆಯ ಸಾಧನೆಗಳನ್ನು ವಿವರಿಸಿ.

50. ಆರನೆ ಪಂಚವಾರ್ಷಿಕ ಯೋಜನೆಯ ಗುರಿಗಳೇನು ?

51. ವಿವಿಧೋದ್ದೇಶ ನದಿ ಕಣಿವೆ ಯೋಜನೆಗಳ ಉಪಯೋಗಗಳೇನು ?

52. ರಫ್ತು ವ್ಯಾಪಾರದ ಪ್ರಾಮುಖ್ಯತೆಯನ್ನು ವಿವರಿಸಿ.

VII. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೂ ಎಂಟು ವಾಕ್ಯಗಳಲ್ಲಿ ಉತ್ತರಿಸಿ : 4 × 4 = 16

53. ಭಾರತದಂತಹ ರಾಷ್ಟ್ರಗಳಿಗೆ ಪಂಚವಾರ್ಷಿಕ ಯೋಜನೆಗಳು ಅಗತ್ಯವಾಗಿವೆ ಎಂದು ಸಮರ್ಥಿಸಿ.

54. ಇತ್ತೀಚಿನ ದಿನಗಳಲ್ಲಿ ಭಾರತೀಯರ ಜೀವಿತಾವಧಿಯು ಹೆಚ್ಚುತ್ತಿದೆ ಎಂದು ಸಮರ್ಥಿಸಿ.

55. ಭಾರತೀಯರ ಜೀವನ ಮಟ್ಟ ಹೆಚ್ಚುತ್ತಿದೆ ಎಂದು ಹೇಗೆ ತಿಳಿದುಕೊಳ್ಳಬಹುದು ?

56. ಭಾರತವು ಒಂದು ಅಭಿವೃದ್ಧಿಶೀಲ ರಾಷ್ಟ್ರವಾಗಿದೆ ಎಂದು ಏಕೆ ಪರಿಗಣಿಸಲಾಗಿದೆ ?